MC No. 21/2024
PW-1

**(ಇಂದು ದಿಃ 22-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**ಪಾಟೀ ಸವಾಲುಃ- ಶ್ರೀ.SGA ವಕೀಲರಿಂದಃ-**

ಮದುವೆ ಮುಂಚೆ ನಮ್ಮ ಕುಟುಂಬಕ್ಕೆ ಮತ್ತು ಎದುರುದಾರರ ಕುಟುಂಬಕ್ಕೆ ಸಂಬಂಧ ಇರಲಿಲ್ಲ. ನಮ್ಮ ಮದುವೆ ಆಗಿದ್ದು ಹೊಸ ಸಂಬಂಧ. ಮದುವೆ ಸಂಬಂಧವನ್ನು ರಂಜೋಳದ ನಾರಾಯಣರೆಡ್ಡಿ ನಡುವೆ ಇದ್ದು ಮಾಡಿಸಿದ್ದಾರೆ. 1 ಬಾರಿ ಕನ್ಯೆ ನೋಡಲು ಹೋಗಿದ್ದೆವು ಮಾತು ಬರುವುದಿಲ್ಲ ಎಂದು ಹೇಳಿದ್ದರು ಅದು ಗೊತ್ತಿದ್ದು ಮದುವೆ ಆಗಿದ್ದೇನೆ ಎಂದರೆ ಸರಿ. ಮದುವೆ ಆದ ನಂತರ ನಮ್ಮ ಗ್ರಾಮ ಹಯ್ಯಾಳದಲ್ಲಿ ವಾಸ ಇದ್ದೆವು. ನಮ್ಮ ಮನೆಯಲ್ಲಿ ನಾನು ನನ್ನ ತಾಯಿ ವಾಸ ಇರುತ್ತೇವೆ.

ಅರ್ಜಿಯಲ್ಲಿ ನಾನು ಹೇಳಿರುವಂತೆ ಎದುರುದಾರರು ಮಾನಸಿಕ ಅಸ್ಥವ್ಯಸ್ಥರಿದ್ದಾರೆ ಎಂದು ನನಗೆ ಮದುವೆ ಆದ 1 ತಿಂಗಳಿಗೆ ಗೊತ್ತಾಗಿದೆ. 2022 ರಲ್ಲಿ ಡಾಃ ಪಂತಗೆ, ಕಲಬುರಗಿ ರವರ ಬಳಿ ಎದುರುದಾರಳಿಗೆ ಚಿಕಿತ್ಸೆ ಕೊಡಿಸಿದ್ದೇನೆ. 2022 ರಲ್ಲಿ ಡಾ|| ಪಂತಗೆ ರವರ ಬಳಿ ಎದುರುದಾರಳಿಗೆ ಚಿಕಿತ್ಸೆ ಕೊಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ನಾನು ಹಾಜರುಪಡಿಸಿದ ದಾಖಲಾತಿ ಎಂದು ಹೇಳಿ ಗುರುತಿಸಿರುತ್ತಾರೆ. ನಿಪಿ-2 ರಲ್ಲಿ ವೈದ್ಯರೀಗೆ ಮಾಹಿತಿ ಕೊಟ್ಟವರು ರೋಗಿಯ ಗಂಡ ಎಂದು ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಂತೆ 2023-ಜೂನ್ ನಲ್ಲಿ ಆಸ್ಪತ್ರೆಗೆ ಹೋಗಿದ್ದೆವೆ. ನಿಪಿ-2 ರಲ್ಲಿ ಎದುರುದಾರಳು ಮಾನಸಿಕ ಅಸ್ಥವಸ್ಥರು ಎಂದು ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ-3 Brain City Scan report ಎಂದರೆ ಸರಿ. ನಿಪಿ-3 ರಲ್ಲಿ ಕೂಡ ಎದುರುದಾರರು ಮಾನಸಿಕ ಅಸ್ದವಸ್ಥರು ಎಂದು ಉಲ್ಲೇಖ ಇಲ್ಲ ಎಂದರೆ ಸರಿ. ವರದಿಯಲ್ಲಿ ಯಾವುದೇ ಅಸಹಜತೆ ಇಲ್ಲ ಎಂದು ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೈದ್ಯರು ನನ್ನ ಹೆಂಡತಿಗೆ ಮಾನಸಿಕ ಅಸ್ಥವಸ್ಥತೆ ಇಲ್ಲ ಎಂದು ಹೇಳಿದರು ಕೂಡ ನಾನು ಅವಳಿಗೆ ದುರುದ್ದೇಶಪೂರ್ವಕಾಗಿ ಮಾತ್ರೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಯಾವುದೇ ದಾಖಲಾತಿಯಲ್ಲಿ ಮಾನಸಿಕ ಅಸ್ಥವಸ್ಥರಿಗೆ ನೀಡುವ ಮಾತ್ರೆಗಳನ್ನು ವೈದ್ಯರು ಸಲಹೆನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ಅನ್ನು ಉದ್ದೇಶಪೂರ್ವಕವಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರು ಮನೆಯಲ್ಲಿ ಎಲ್ಲಾ ಕೆಲಸ ಮಾಡುತ್ತಿದ್ದರು ಎಂದರೆ ಮಾಡುತ್ತಿದ್ದರು, ಮಾಡುತ್ತಿರಲಿಲ್ಲ. ಎದುರುದಾರರು ನನ್ನ 2ನೇ ಹೆಂಡತಿ ಎಂದರೆ ಸರಿ. ಮೊದಲನೇ ಹೆಂಡತಿ ಹೃದಾಯಘಾತದಿಂದ ತೀರಿಹೋಗಿದ್ದಾರೆ. ಮೊದಲನೆ ಹೆಂಡತಿಯಿಂದ ನನಗೆ ಮಕ್ಕಳು ಇಲ್ಲ. ನನ್ನ

ಮದುವೆ 1996 ರಲ್ಲಿ ಆಗಿತ್ತು. 2020 ರಲ್ಲಿ ನನ್ನ ಹೆಂಡತಿ ತೀರಿಹೋಗಿದ್ದಾರೆ. ನನಗೆ ಮಕ್ಕಳು ಆಗಿರಲಿಲ್ಲ ಎಂದರೆ ಸರಿ. ಈಗ ನಾನು ಎದುರುದಾರರಿಗೆ ಕಿರುಕುಳ ನೀಡುವ ರೀತಿಯಲ್ಲಿಯೇ ನನ್ನ ಮೊದಲನೇ ಹೆಂಡತಿಗೆ ಕೂಡ ಕಿರುಕುಳ ನೀಡಿದ್ದ ಕಾರಣ ಅವಳು ತೀರಿಹೋದರು ಎಂದರೆ ಸರಿಯಲ್ಲ.

ನಮ್ಮ ಮನೆ ಅಕ್ಕ ಪಕ್ಕದಲ್ಲಿ 15-20 ಅಡಿ ದೂರದಲ್ಲಿ ಮನೆಗಳಿವೆ. ನಾನು ಮದುವೆ ಆದ ನಂತರ ಸ್ವಲ್ಪ ದಿನ ಸರಿಯಾಗಿದ್ದು ನಂತರ ವೈದ್ಯರು ನನ್ನ ಪರೀಕ್ಷೆ ಮಾಡಿ ನನಗೆ ಮಕ್ಕಳು ಆಗುವುದಿಲ್ಲ ಎಂದು ಹೇಳಿದ ನಂತರ ನಾನು ಎದುರುದಾರಳಿಗೆ ಹೊಡೆ ಬಡೆ ಮಾಡಿ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ನನಗೆ ಸಿಟ್ಟಿಗೆ ಬರುತ್ತಿದ್ದಳು ಮತ್ತು ಹೊಡೆ ಬಡೆ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಮಾತು ಬರುವುದಿಲ್ಲ, ಆದರೆ ಅವಳು ಸೂಚನೆ ಮೂಲಕ ಬೈಯುತ್ತಿದ್ದಳು. ಆರೀತಿ ಸೂಚನೆ ಮೂಲಕ ಬೈಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ತಮ್ಮನಿಗೆ ಎದುರುದಾರಳು ಬೈದರು ಮತ್ತು ಹೋಡದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ಕೆಲವೊಂದು ಬಾರಿ ಮಾತ್ರ ಅಸ್ಥವಸ್ಥೆ ಬರುತ್ತದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಶಿವಪ್ಪ ನನ್ನು ಆತ ದನ ಕಾಯುತ್ತಿದ್ದಾಗ ನನ್ನ ಹೆಂಡತಿ ಹೊಡೆದಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಪ್ಪ ನನ್ನ ಹೆಂಡತಿ ವಿರುದ್ದ ದೂರು ನೀಡಿಲ್ಲ. ನನ್ನ ಹೆಂಡತಿ ಬೆಳ್ಳಿ ಬಂಗಾರ ಬೇಡಿ ಜಗಳ ಮಾಡಿದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3ನೇ ಮದುವೆ ಆಗುವ ಸಲುವಾಗಿ ಉದ್ದೇಶಪೂರ್ವಕವಾಗಿ ಎದುರುದಾರರು ಮಾನಸಿಕ ಅಸ್ಥವಸ್ಥೆ ಎಂದು ಹೇಳಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರು ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ, ಪೋಲಿಸ ಠಾಣೆಗೆ ದೂರು ನೀಡಿಲ್ಲ. ಎದುರುದಾರರ ಆತ್ಮಹತ್ಯೆಗೆ ಯತ್ನಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವಳಿಗೆ ಯಾವುದೆ ಗಾಯ ಆಗಿರಲಿಲ್ಲ ಕಾರಣ ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರ ತಂದೆ ತಾಯಿ ಮತ್ತು ಸಂಬಂಧಿಕರನ್ನು ಕರೆಯಿಸಿ ಪಂಚಾಯತಿ ಮಾಡಿದ್ದೇವೆ. ಎದುರುದಾರರ ತವರು ಮನೆಯಲ್ಲಿ ಪಂಚಾಯತಿ ಮಾಡಿದ್ದೇವೆ. ನಾನು ಮತ್ತು ಇತರ 10 ಜನ ಪಂಚಾಯತಿಗೆ ಹೋಗಿದ್ದೆವು. ಪಂಚಾಯತಿ ಆದ ಬಗ್ಗೆ ನನ್ನ ಅರ್ಜಿಯಲ್ಲಿ ಹೇಳಿ ಬರೆಸಿಲ್ಲ. ನಾನು ಹೇಳಿದಂತೆ ಯಾವುದೇ ಪಂಚಾಯತಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ಹೆಂಡತಿ ಕಡೆಯವರು ಬಂದು ಹೆಂಡತಿ ಜೊತೆ

ಚೆನ್ನಾಗಿ ಜೀವನ ಮಾಡು ಎಂದು ನನಗೆ ಬುದ್ದಿಮಾತು ಹೇಳಿದ್ದರು ಎಂದರೆ ಸರಿಯಲ್ಲ, ನಾನು ಇಷ್ಟೇಲ್ಲ ಹಿಂಸೆ ಕೊಟ್ಟರು ಇವತ್ತಿಗೂ ಎದುರುದಾರರು ನನ್ನೊಂದಿಗೆ ಜೀವನ ಮಾಡಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ, ಎದುರುದಾರರ ತಂದೆ ತಾಯಿ ಮತ್ತು ಸಂಬಂಧಿಕರು ತಿಳಿ ಹೇಳಿದರು ನಾನು ಒಪ್ಪುತ್ತಿಲ್ಲ ಎಂದರೆ ಸರಿಯಲ್ಲ, ಜೂನ್ 2024 ರಲ್ಲಿ ಸೇಡಂ ಮಹಿಳಾ ಸಮಿತಿಗೆ ಎದುರುದಾರಳು ದೂರು ನೀಡಿದ್ದಳು ಕಾರಣ ಸಮಿತಿ ಅವರು ನನಗೆ ಬರಲು ಹೇಳಿದ್ದರು ಹಾಗಾಗಿ ನಾನು ಹೋಗಿದ್ದೆ. ಅಲ್ಲಿ ನಾನು ಪಂಚಾಯತಿ ಬೇಡ ಎಂದು ಹೇಳಿದೆ.

ನನ್ನ ಅರ್ಜಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಎದುರುದಾರಳ ವಿರುದ್ದ ಮಾಡಿರುವ ಎಲ್ಲಾ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ, ನಾನು ವ್ಯವಸಾಯ ಮಾಡುತ್ತೇನೆ. ನಮ್ಮ ಕುಟುಂಬಕ್ಕೆ 3 ಎಕರೆ 35 ಗುಂಟೆ ಜಮೀನು ಇದೆ. ನನ್ನ ತಂದೆಗೆ ನಾವು 4 ಜನ ಮಕ್ಕಳು. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**